ಖರೀದಿ ಮತ್ತು ಮಾರಾಟ.ದ ಮೇಲೆ ವ್ಯಾಪಾರಿ ಪಾವತಿಸಬೇಕಾದ ತೆರಿಗೆಯನ್ನು ದಿನಾಂಕ 01.04.2010ರಿಂದ ಜಾರಿಗೆ ಬರುವಂತೆ ಕಡಿತಗೊಳಿಸಿ ದಿನಾಂಕ 31.03.2010ರಂದು ಹೊರಡಿಸಲಾದ ಎಫ್‌ಡಿ 82 ಸಿಎಸ್‌ಎಲ್ 10(6) ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತಿದ್ದೇನೆ.

1979ರ ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಕಾಯ್ದೆ 31ರ ಪ್ರಕರಣದ ಮೇರೆಗೆ:

1979ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಿನ ತೆರಿಗೆ ಕಾಯ್ದೆಯಡಿ ನಶ್ಯೆಯನ್ನು ಹೊರತುಪಡಿಸಿ ಎಲ್ಲಾ ತಂಬಾಕು ಉತ್ಪನ್ನಗಳ ಪ್ರವೇಶದ ಮೇಲೆ ವ್ಯಾಪಾರಿಯು ಪಾವತಿಸಬೇಕಾದ ತೆರಿಗೆಯನ್ನು ದಿನಾಂದ 01.04.2010ರಿಂದ ಜಾರಿಗೆ ಬರುವಂತೆ ಶೇ.2ಕ್ಕೆ ಇಳಿಸಿ ದಿನಾಂಕ 31.03.2010ರಂದು ಹೊರಡಿಸಲಾದ ಎಫ್‌ಡಿ 86 ಸಿಎಸ್‌ಎಲ್ 2010ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತಿದ್ದೇನೆ.

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ ಕಲಂ 8(3)ರ ಮೇರೆಗೆ:

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮದ ನಿಯಮಾಗಳಿಗೆ 65–ಎ ಹೊಸ ನಿಯಮ ಸೇರ್ಪಡೆಗೆ ಸಂಬಂಧಿಸಿದಂತೆ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರುವಂತೆ ದಿನಾಂಕ 21.04.2010ರಂದು ಹೊರಡಿಸಲಾದ ಎಫ್‌ಡಿ 6 ಎಸ್‌ಆರ್‌ಎ 2008ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತಿದ್ದೇನೆ.

1984ರ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 23(3)ರ ಮೇರೆಗೆ:

1985ರ ಕರ್ನಾಟಕ ಲೋಕಾಯುಕ್ತ ನಿಯಮಾವಳಿ ನಿಯಮ 6ಎಗೆ ತಿದ್ದುಪಡಿ ಮಾಡಿ ದಿನಾಂಕ 15.06.2009 ಹಾಗೂ 18.06.2009ರಂದು ಹೊರಡಿಸಲಾದ ಸಿಆಸುಇ 2 ಸೇಲೋಯು 2010ನೇ ಸಂಖ್ಯೆಯ ಅಧಿಸೂಚನೆ ಮತ್ತು ತಿದ್ದುಪಡಿ ಆದೇಶವನ್ನು ಮಂಡಿಸುತ್ತಿದ್ದೇನೆ.

2005ರ ಮಾಹಿತಿ ಹಕ್ಕು ಅಧಿನಿಯಮದ ಕಲಂ 29(2)ರ ಮೇರೆಗೆ:

1. ದಿನಾಂಕ 27.11.2009ರಂದು ಹೊರಡಿಸಿರುವ ಅಧಿಸೂಚನೆ ಸಂಖ್ಯೆ ಡಿ.ಪಿ.ಎ.ಆರ್ 131 ಇಜಿಎಮ್ 2009ನ್ನು ರದ್ದುಪಡಿಸಿ, ಕೆಲವು ಅಧಿಕಾರಿಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಇ–ಆಡಳಿತ ವಿಭಾಗಕ್ಕೆ